ಕರ್ನಾಟಕ ರಾಜ್ಯಪತ್ರ
ಅಧಿಕೃತವಾಗಿ ಪ್ರಕಟಿಸಲಾದುದು
ವಿಶೇಷ ರಾಜ್ಯ ಪತ್ರಿಕೆ

| ಭಾಗ – ೩<br>Part – III | ಬೆಂಗಳೂರು, ಬುಧವಾರ, ೧೧, ಫೆಬ್ರವರಿ, ೨೦೨೬(ಮಾಘ, ೨೨, ಶಕವರ್ಷ, ೧೯೪೭)<br>BENGALURU, WEDNESDAY, 11, FEBRUARY, 2026(MAGHA, 22, SHAKAVARSHA, 1947) | ನಂ. ೧೫೦<br>No. 150 |
|---|---|---|

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೋಲಾರ ಜಿಲ್ಲೆ, ಕೋಲಾರ.

## (ಚುನಾವಣೆ ಶಾಖೆ)

ನಂ. ಇಎಲ್ಎನ್ (2) ಸಿಆರ್/189/2025–26 ದಿನಾಂಕ : 11/02/2026

ವಿಷಯ : ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 41 ಮತ್ತು 42 ರಂತೆ ಅವಧಿ ಪೂರ್ಣಗೊಂಡಿರುವ / ಪೂರ್ಣಗೊಳ್ಳಲಿರುವ ಗ್ರಾಮ ಪಂಚಾಯ್ತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸುವ ಕುರಿತು.

ಉಲ್ಲೇಖ : ಸರ್ಕಾರದ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಪತ್ರ ನಂ.ಗ್ರಾಅಪ 1003 ಗ್ರಾಪಂಅ 2025 ದಿನಾಂಕ : 16/01/2026.
2. ತಹಶೀಲ್ದಾರ್, ಕೆ.ಜಿ.ಎಫ್ ತಾಲ್ಲೂಕು ರವರ ಪತ್ರದ ಸಂಖ್ಯೆ:ಇಎಲ್ಎನ್: ಸಿಆರ್:19: 2025–26 ದಿನಾಂಕ: 10/02/2026.

.. .. .. ..

## ಅಧಿಸೂಚನೆ

ಕೋಲಾರ ಜಿಲ್ಲೆಯ ಗ್ರಾಮ ಪಂಚಾಯಿತಿಗಳ 5 ವರ್ಷಗಳ ಅವಧಿಯು ಫೆಬ್ರವರಿ 2026 ನೇ ಮಾಹೆಯಲ್ಲಿ ಮುಗಿಯುವುದರಿಂದ, ಗ್ರಾಮ ಪಂಚಾಯಿತಿಗಳಿಗೆ ಸಾರ್ವತ್ರಿಕ ಚುನಾವಣೆಯು ನಡೆದಿಲ್ಲವಾದ್ದರಿಂದ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 8(1)(ಬಿ)(ii)ರಡಿ ಆಡಳಿತಾಧಿಕಾರಿಯನ್ನು ನೇಮಿಸುವಂತೆ ಉಲ್ಲೇಖ (1) ರಂತೆ ಸರ್ಕಾರವು ನಿರ್ದೇಶಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 41 ಮತ್ತು 42 ರಂತೆ ಅವಧಿ ಪೂರ್ಣಗೊಂಡಿರುವ / ಪೂರ್ಣಗೊಳ್ಳಲಿರುವ ***ಕೋಲಾರ ಜಿಲ್ಲೆಯ ಕೆ.ಜಿ.ಎಫ್. ತಾಲ್ಲೂಕಿನ 16 ಗ್ರಾಮ ಪಂಚಾಯ್ತಿಗಳಿಗೆ*** ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 8(1)(ಬಿ)(ii)ರ ಪ್ರಕಾರ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ***ಡಾ|| ಎಂ. ಆರ್. ರವಿ ಭಾ.ಆ.ಸೇ.,*** ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ, ಕೋಲಾರ ಆದ ನಾನು ಈ ಕೆಳಕಂಡ ಕೋಷ್ಟಕದ ಅಂಕಣ 3 ರಲ್ಲಿ ನಮೂದಿಸಿರುವ ಗ್ರಾಮ ಪಂಚಾಯ್ತಿಗಳಿಗೆ ಅಂಕಣ 4 ರಲ್ಲಿ ನಮೂದಿಸಿರುವಂತೆ ಗ್ರಾಮ ಪಂಚಾಯಿತಿ ಸದಸ್ಯರುಗಳ 05 ವರ್ಷಗಳ ಅವಧಿ ಪೂರ್ಣಗೊಂಡಿರುವುದರಿಂದ / ಪೂರ್ಣಗೊಳ್ಳಲಿರುವುದರಿಂದ ಅಂಕಣ 2 ರಲ್ಲಿ ನಮೂದಿಸಿರುವ ಅಧಿಕಾರಿಗಳನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ **ಆಡಳಿತಾಧಿಕಾರಿಗಳನ್ನಾಗಿ** ನೇಮಕ ಮಾಡಿ ಆದೇಶಿಸಿದ್ದೇನೆ.

| ಕ್ರ. ಸಂ. | ಆಡಳಿತಾಧಿಕಾರಿಯಾಗಿ ನೇಮಕಗೊಳಿಸಿರುವ ಅಧಿಕಾರಿಯ ಪದನಾಮ ಮತ್ತು ವಿಳಾಸ | ಗ್ರಾಮ ಪಂಚಾಯ್ತಿಗಳ ಹೆಸರು | ಅವಧಿ ಪೂರ್ಣಗೊಳ್ಳುವ ದಿನಾಂಕ |
|---|---|---|---|
| 1 | 2 | 3 | 4 |
| 1 | ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಕೆ.ಜಿ.ಎಫ್ ತಾಲ್ಲೂಕು. | ವೆಂಗಸಂದ್ರ | 08/02/2026 |
| | | ರಾಮಸಾಗರ | 09/02/2026 |
| 2 | ಪೌರಾಯುಕ್ತರು, ನಗರಸಭೆ, ಕೆ.ಜಿ.ಎಫ್ | ಹುಲ್ಕೂರು | 07/02/2026 |
| | | ಟಿ.ಗೊಲ್ಲಹಳ್ಳಿ | 09/02/2026 |
| 3 | ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಕೆ.ಜಿ.ಎಫ್ ತಾಲ್ಲೂಕು | ಬೇತಮಂಗಲ | 08/02/2026 |
| | | ಎನ್.ಜಿ.ಹುಲ್ಕೂರು | 08/02/2026 |
| | | ಘಟ್ಟಕಾಮದೇನಹಳ್ಳಿ | 09/02/2026 |
| | | ಪಾರಾಂಡಹಳ್ಳಿ | 09/02/2026 |
| 4 | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕೆ.ಜಿ.ಎಫ್ ತಾಲ್ಲೂಕು. | ಘಟ್ಟಮಾದಮಂಗಲ | 07/02/2026 |
| | | ಸುಂದರಪಾಳ್ಯ | 07/02/2026 |
| 5 | ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕೆ.ಜಿ.ಎಫ್ ತಾಲ್ಲೂಕು | ಮಾರಿಕುಪ್ಪ | 07/02/2026 |
| 6 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಉಪ ವಿಭಾಗ, ಕೆ.ಜಿ.ಎಫ್ ತಾಲ್ಲೂಕು | ಕಂಗಾಂಡ್ಲಹಳ್ಳಿ | 08/02/2026 |
| | | ಶ್ರೀನಿವಾಸಸಂದ್ರ | 14/02/2026 |
| 7 | ಮುಖ್ಯ ಪಶು ವೈದ್ಯಾಧಿಕಾರಿ (ಆಡಳಿತ), ಪಶು ಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ, ಕೆ.ಜಿ.ಎಫ್ ತಾಲ್ಲೂಕು | ಕಮ್ಮಸಂದ್ರ | 09/02/2026 |
| | | ಕ್ಯಾಸಂಬಳ್ಳಿ | 14/02/2026 |
| | | ಜಕ್ಕರಸನಕುಪ್ಪ | 10/02/2026 |

ಸರ್ಕಾರದ ದಿನಾಂಕ : 19/6/2020ರ ಸುತ್ತೋಲೆಯಂತೆ, ಆಡಳಿತಾಧಿಕಾರಿಗಳ ಅಧಿಕಾರ ಮತ್ತು ಕರ್ತವ್ಯಗಳು ಈ ಕೆಳಕಂಡಂತಿರುತ್ತದೆ.

1. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 8(4) ರನ್ವಯ ಆಡಳಿತಾಧಿಕಾರಿಯನ್ನು ಈ ಅಧಿನಿಯಮದ ಉದ್ದೇಶಕ್ಕಾಗಿ ಕ್ರಮಬದ್ಧವಾಗಿ ರಚಿಸಿದ ಗ್ರಾಮ ಪಂಚಾಯಿತಿ ಎಂದು ಭಾವಿಸಲಾಗಿದೆ.
2. ಸದರಿ ಅಧಿನಿಯಮದ ಪ್ರಕರಣ 8(3) ರನ್ವಯ ಆಡಳಿತಾಧಿಕಾರಿಯು ಗ್ರಾಮ ಪಂಚಾಯಿತಿಯ ಎಲ್ಲಾ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಚಲಾಯಿಸತಕ್ಕದ್ದು ಮತ್ತು ನೆರವೇರಿಸತಕ್ಕದ್ದಾಗಿದೆ.
3. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ರನ್ವಯ ಗ್ರಾಮ ಪಂಚಾಯಿತಿಯ ಹಣಕಾಸಿನ ವ್ಯವಹಾರವನ್ನು ಆಡಳಿತಾಧಿಕಾರಿ ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಜಂಟಿಯಾಗಿ ನಿರ್ವಹಿಸತಕ್ಕದ್ದು.
4. ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳನ್ನು ಕಾಲ ಕಾಲಕ್ಕೆ ನಡೆಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.
5. ಅಧಿನಿಯಮದ ಪ್ರಕರಣ 58 ರಂತೆ ಗ್ರಾಮ ಪಂಚಾಯಿತಿ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.
6. ಅಧಿನಿಯಮದ ಪ್ರಕರಣ 60 ರಂತೆ ಗ್ರಾಮ ಪಂಚಾಯಿತಿಯ ಸಾಮಾನ್ಯ ಅಧಿಕಾರಿಗಳನ್ನು ಚಲಾಯಿಸತಕ್ಕದ್ದು.
7. ಅಧಿನಿಯಮದ ಪ್ರಕರಣ 62 ರಂತೆ ಅಧ್ಯಕ್ಷನ ಪ್ರಕಾರ್ಯಗಳು ಮತ್ತು ಅಧಿಕಾರಗಳನ್ನು ಚಲಾಯಿಸತಕ್ಕದ್ದು.
8. ಗ್ರಾಮ ಪಂಚಾಯಿತಿ ಗ್ರಂಥಾಲಯಗಳ ನಿರ್ವಹಣೆಯನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಗ್ರಾಮ ಪಂಚಾಯಿತಿಗಳಿಗೆ ವರ್ಗಾಯಿಸಲಾಗಿದ್ದು, ಗ್ರಾಮ ಪಂಚಾಯಿತಿ ಗ್ರಂಥಾಲಯಗಳ ನಿರ್ವಹಣೆ ಮಾಡತಕ್ಕದ್ದು ಮತ್ತು ಗ್ರಂಥಾಲಯ ಮೇಲ್ವಿಚಾರಕರಿಗೆ ಗೌರವಧನವನ್ನು ಮಾಸಿಕವಾಗಿ ಪಾವತಿಸತಕ್ಕದ್ದು.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



9. ಗ್ರಾಮ ಪಂಚಾಯಿತಿ ನೌಕರರಿಗೆ ಮಾಸಿಕವಾಗಿ ಕನಿಷ್ಠ ವೇತನ ಪಾವತಿಸತಕ್ಕದ್ದು.

10. ಸರ್ಕಾರದ ಸುತ್ತೋಲೆ ಸಂಖ್ಯೆ ಗ್ರಾಆಪ 74 ಗ್ರಾಪಂಸಿ 2017 (ಭಾಗ–1) ದಿನಾಂಕ : 12/3/2018 ರಲ್ಲಿ ಗ್ರಾಮ ಪಂಚಾಯಿತಿಗಳು ಯಾವುದೇ ಹುದ್ದೆಗಳಿಗೆ ನೇಮಕಾತಿ ಮಾಡುವುದನ್ನು ಸಂಪೂರ್ಣ ನಿಷೇಧಿಸಲಾಗಿದೆ. ಆಡಳಿತಾಧಿಕಾರಿಯು ಗ್ರಾಮ ಪಂಚಾಯಿತಿಗೆ ಯಾವುದೇ ನೌಕರರನ್ನು ನೇಮಕ ಮಾಡಿಕೊಳ್ಳತಕ್ಕದ್ದಲ್ಲ.

ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ, ಕೋಲಾರ.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH